ಅಳ್ತಿದ್ರಾ?"

ಅತ್ತೆ ಅಂದ್ರು, "ಗಂಡು ಮಗು, ಕೊಂದು ಬಿಟ್ಟಲ್ಲೆ."

ಮಂದಾಕಿನಿಗೆ ರೇಗ್ತು. "ಸಾಕಿನ್ನು ಹೊರಡೋಣ. ಮನೇಗೆ ಹೋಗಬೇಕು ನಾನು!"

ಮೈಯಲ್ಲಿ ಶಕ್ತಿ ಅಷ್ಟಿರ್ಲಿಲ್ಲ. ತೂರಾಡ್ತಲೇ ಎದ್ಲು. ಮಂಚ ಹಿಡುಕೊಂಡ್ಲು. ಗೋಡೆ ಹಿಡಿದಾಯ್ತು. ತೂರಾಡ್ತಲೇ ಕಿಟಕಿ ಹಿಡ್ದು ಬಾಗಿಲು ತೆಗ್ದು ನಿಂತ್ಲು. ಕೋಣೆಯಿಂದ ಆಚೆಗೆ ಬರೋಕೆ ಮೊದಲು ಒಮ್ಮೆ ತಿರುಗಿ ನೋಡಿದ್ಲು. ಒಂದಾಸೆ, ಸಣ್ಣಾಸೆ... ನಾಲ್ಕು ಜನ ನನ್ನವರೇ ಇದ್ದಾರೆ. ಮೈಯಲ್ಲಿ ಶಕ್ತಿ ಇಲ್ಲ. ಆಸರೆ ಬೇಕು. ಹೆಗಲು ಬೇಕು. ಯಾರಾದ್ರೂ ಕೊಡ್ತಾರಾ? ಮನುಷ್ಯರು ಕೂತಳ್ತಿದ್ರು. ಅವರಿಗೊತ್ತಾಗ್ಲೇ ಇಲ್ಲ, ಅಂಟಿಕೊಂಡವ್ರು ಆಸರೆ ಕೊಡೋ ಬದ್ಲು, ಅಳುವ ಸಂಭ್ರಮದಲ್ಲಿದ್ರು. ಸಾವಿನ ಸಂಭ್ರಮದಲ್ಲಿ ಜೀವ ನಲುಗ್ಹೋಗಿತ್ತು.

★★★

ಎರಡು ದಿನವಾಯ್ತು. ಮಂದಾಕಿನಿ ಕೋಣೆಯಿಂದಾಚೆ ಬಂದಿರ್ಲೇ ಇಲ್ಲ. ಗಂಡ ಬಂದಿದ್ದ. ರಾತ್ರೆ 12ರ ವರೆಗೂ ಕಂಠಪೂರ್ತಿ ಕುಡಿದು, ಬೆಳಗ್ಗಿನ ಜಾವ ಕೋಣೆಗೆ ಬಂದಿದ್ದ. ಮಂದಾಕಿನಿ ಮಲಗಿದ್ದವಳು ಎದ್ದು ಕೂತ್ಲು. ಅವನೂ ಮಂಚದ ತುದೀಲಿ ಕೂತಿದ್ದ. ತಲೆ ಕೆದರಿತ್ತು. ಬೆವರಿಳಿತಿತ್ತು. ಸೇದಿದ ಸಿಗರೇಟಿನ ವಾಸ್ನೆ ಬರ್ತಿತ್ತು.

ಪಾಪ, ದುಃಖದಲ್ಲಿದ್ದಾನೆ. ಸಂತೈಸ್ಬೇಕು; ತಾಯಾಗಬೇಕು, ಮಡಿಲಲ್ಲಿ ಮಲಗಿಸ್ಕೋಬೇಕು. ತಲೆಕೂದಲಲ್ಲಿ ಬೆರಳಾಡಿಸ್ತಾ ಹೇಳ್ಬೇಕು, "ಹೋಗಲಿ ಬಿಡೋ, ಇನ್ನೊಂದಾಗುತ್ತೆ. ಚಿತ್ತಾರ ಅಳಿಸಿದ್ದು. ಗೋಡೆ ಬಿದ್ದದ್ದಲ್ಲ. ಮತ್ತೆ ಚಿತ್ತಾರ ಮೂಡ್ಸೋಣ. ಹೆಣ್ಣು ನಾನು ಇನ್ನು ಹತ್ತು ಹೊತ್ತು ಹೆರಬಲ್ಲೆ."

ಅವನೆದ್ದ. ತೂರಾಡ್ತಿದ್ದ. ಅಂದ, "ಐ ಆ್ಯಮ್ ಸ್ಸಾರಿ, ಯು ಡಿಸ್ಸಪಾಯಿಂಟೆಡ್ ಮಿ." ಏಳೋ ಪ್ರಯತ್ನದಲ್ಲಿದ್ದ ಮಂದಾಕಿನಿ ಕುಸಿದ್ಲು.

ಅಮ್ಮ ಅಂದ್ರು, "ಬಂದು ನಾಲ್ಕು ದಿನ ಆಯ್ತು. ಹೊರಡ್ತೀವಿ. ನನಗೂ ಕೆಲಸ, ಅವರಿಗೂ ಕೆಲ್ಸ. ಅಲ್ದೇ ಹೇಗಿದ್ರೂ ಇಲ್ಲಿ ಕೆಲ್ಸವಿಲ್ಲ." ಮಂದಾಕಿನಿ ಎದ್ದು ಕಿಟಕಿಯಿಂದ ಆಚೆ ನೋಡಿದ್ಳು, "ಮಗು ಹೋಯ್ತು. ನಮ್ಮ ಕೈಲಿಲ್ಲ. ಮೈನಿಂದು ಬಾಣಂತಿ ಮೈ, ಹಸಿ ಮೈ ಬಾಣಂತನವಾಗಬೇಕು. ಇಲ್ಲಿದ್ದು ಮಾಡಕ್ಕಾಗಲ್ಲ. ನಿನ್ನ ಅತ್ತೆಗನ್ಸುತ್ತೆ, ಮಗು ಸತ್ರೂ, ಅಮ್ಮ ಮಗಳ ಬಾಣಂತನದ ಸಂಭ್ರಮ ಸಾಯ್ಲಿಲ್ಲ ಅಂತ. ಅಲ್ಲಿಗೇ ಬರ್ತೀಯಾ?"

ಮಂದಾಕಿನಿ ಮನಸ್ಸಂತು, "ಸಾಕು ಕಣೆ ಸಂಸಾರ, ಈ ಗಂಡ ಮಕ್ಕಳ ಬವಣೆ! ಪ್ರೀತಿ ಪ್ರೇಮದ ಪ್ರಲಾಪ! ಕರ್ಕೊಂಡು ಹೋಗೇ. ನನ್ನನ್ನು ನನ್ನ ಬಾಲ್ಯಕ್ಕೆ ಕರ್ಕೊಂಡು ಹೋಗಿಬಿಡೆ ವಾಪಸ್ಸು. ನೀನು ಅಮ್ಮಾ ನಾನು ನಿನ್ನ ಕೂಸು. ಮತ್ತೆ ಅಂಗಳದಲ್ಲಿ ಗೆರೆಗಳನ್ನು ದಾಟ್ತಾ ಕುಂಟಾಬಿಲ್ಲೆ ಆಡೋಣ."

ಮನಸ್ಸಿನ ಭಾವ ಮಾತಾಗೋಕೆ ಮೊದಲೇ ಅಮ್ಮ ಅಂದಿದ್ರು.

"ಹೇಳೀ ಕೇಳಿ ಪ್ರೀತ್ಸಿ ಮದುವೆ ಆದೋಳು ನೀನು. ಅವನಪ್ಪ ಅಮ್ಮನಿಗೆ ಈ ಮದುವೆ ಇಷ್ಟ ಇರ್ಲಿಲ್ಲ. ಒಬ್ನೇ ಮಗ ಅವನ್ನ ಎದ್ರಾಕ್ಕೊಳ್ಳಕ್ಕಾಗಲ್ಲ. ಎಲ್ಲ ಸುಮ್ನಿದ್ರು. ಈಗ ಅವರಿಗೊಂದು ಕಾರಣ ಸಿಕ್ತು. ಇನ್ನು ನಿನ್ನ ಗಂಡ ಡಿಪ್ರೆಶನ್ ಅಂತ ಓಡಾಡ್ತಾ ಇದ್ದಾನೆ, ಕುಡಿತ ಹೆಚ್ಚಾಗಿದೆ. ವಯಸ್ಸು ಜಾಸ್ತಿದೆ. ಈ ಬಸಿರ ಬವಣೇಲಿ ನಿನ್ನ ಕಳೇನೂ ಕುಂದಿದೆ. ಆಕರ್ಷಣೆಯ ವಯಸ್ಸು ಆಗ್ಹೋಯ್ತು! ಅವಶ್ಯಕ ಅಂತ ಅಂಟಿಕೊಳ್ಳೋ ವಯಸ್ಸು! ಬಾಣಂತನ ಅಂತ ನಿನ್ನ ಆರು ತಿಂಗ್ಳು